# ಮಕ್ಕಳಿಗಾಗಿ ಬೈಬಲ್
## ಅರ್ಪಿಸುವ

# ಐಶ್ವರ್ಯವಂತನು, ಬಡವನು




ಬರಹಗಾರರು: Edward Hughes
ಚಿತ್ರಲೇಖಕರು: M. Maillot; Lazarus
ಪದ್ಮಾ ಸೈಲೇಸ್: Vinay Shirol
ಅಳವಡಿಸುವವರು: M. Maillot; Sarah S.



60ರ 44ನೇ ಕಥೆ

**www.M1914.org**

***Bible for Children,*** *PO Box 3, Winnipeg, MB R3C 2G1 Canada*



ಅನುಮತಿ: ಈ ಕಥೆಯನ್ನು ಉಪಯೋಗಿಸುವದಕ್ಕೆ ಮತ್ತು ಮುದ್ರಣಹಾಕುವದಕ್ಕೆ ನಿಮಗೆ ಅನುಮತಿ ಇರುವದು.
ಆದರೆ, ಇದನ್ನು ನೀವು ಯಾವ ಕಾರಣಕ್ಕಾಗಿಯೂ ಮಾರಾಟಮಾಡಬಾರದು.


ಕನ್ನಡ

Kannada

ಯೇಸುಸ್ವಾಮಿಗೆ ತಿಳಿದಿತ್ತು ಅದೇನೆಂದರೆ ಅನೇಕ ದಾರ್ಮಿಕ ನಾಯಕರು ಹಣವನ್ನು ದೇವರಿಗಿಂತ ಹೆಚ್ಚಾಗಿ ಪ್ರೀತಿಸುತ್ತಿದ್ದರೆಂಬುದಾಗಿ, ಆತನು ಇಬ್ಬರಿಗೆ ಏನಾಯಿತು ಎಂಬುದನ್ನು ಹೇಳಿದ, ದೇವರಿಲ್ಲದೆ ಐಶ್ವರ್ಯ ಹೊಂದುವುದು ವ್ಯರ್ಥ, ಐಶ್ವರ್ಯದಿಂದ ಸ್ವರ್ಗದ ಜೀವಿತವನ್ನು ಖರಿದೀಸಲಾಗುವದಿಲ್ಲ.



1

ಒಬ್ಬಾನೊಬ್ಬ ಶ್ರೀಮಂತನಿದ್ದನು ಆತನಿಗೆ ಬಹಳ ಬೆಲೆಯುಳ್ಳಂತಹ ಸುಂದರವಾದ ವಸ್ತ್ರಗಳಿದ್ದವು. ಆತನು ಒಬ್ಬ ರಾಜನ ಹಾಗೆ ವಸ್ತ್ರದರಿಸುತ್ತಿದ್ದನು.



2


ಒಬ್ಬ ಬಡವನು ಸಹ ಸಂತೃಪ್ತಿಯಾಗಿ ಊಟಮಾಡುತ್ತೀದ್ದನು. ಪ್ರತಿಯೊಂದು ಊಟವು ಔತನದ ಹಾಗೆ ಇರುತ್ತಿತ್ತು. ಆತನಲ್ಲಿ ಊಟಕ್ಕೆ, ಉಪಹಾರಕ್ಕೆ ಹಾಗೂ ರಾತ್ರಿ ಊಟವನ್ನು ಕರಿದಿಸಲು ಬೇಕಾಗುವಷ್ಟು ಹಣವಿತ್ತಲ್ಲದೆ, ಕರಿದ ತಿಂಡಿಯನ್ನು ಸಹ ತೆಗೆದುಕೊಳಬಹುದಾಗಿತ್ತು.
3


ಒಬ್ಬ ಶ್ರೀಮಂತನ ಮನೆಯ ಬಾಗಿಲಿನ ಮುಂದೆ ಒಬ್ಬ ಬಡ ಅನಾರೋಗ್ಯದಿಂದ ಕೂಡಿದ, ಹಸಿವಿನಿಂದ ಬಳಲುವ, ವ್ಯಕ್ತಿಯಿದ್ದನು ಆತನ ಹೆಸರು ಲಾಜರನು ಎಂಬುದಾಗಿ.
4


ಬಡವನಾದ ಲಾಜರನು ಮೈತುಂಬಾ ಹುಣ್ಣುಗಳಿಂದ ಬಳಲುತ್ತಿದ್ದನು. ಆತನಿಗೆ ಯಾವುದಾದರೂ ರೋಗವಿರಬಹುದು. ಒಂದು ವೇಳೆ ಜನರಿಂದ ಹೊಡೆತವಾಗಲಿ ನಿಂದೆಯಾಗಲಿ ಆತನು ಅನುಭವಿಸಿರಬಹುದು.
5


ಆತನಿಗೆ ಒಳ್ಳೆಯ ಹಾಲು, ಮಾಂಸ ಅಥವಾ ತರಕಾರಿಯ ಆಹಾರವನ್ನು ಸೇವಿಸದೆ ಇರುವದರಿಂದ ಹುಣ್ಣುಗಳು ಬಂದಿರಬಹುದು.
6


ಲಾಜರನು ಆಹಾರಕ್ಕಾಗಿ ಎದುರು ನೋಡಿದನು, ಆತನು ಐಶ್ವರ್ಯವಂತನ ಮೇಜಿನಿಂದ ಬೀಳುವ ಎಂಜಲನ್ನು ತಿಂದು ಸಂತೋಷವಾಗಿದ್ದನು.
7


ಕೆಲವೊಂದು ಸಾರಿ ನಾಯಿಗಳು ಬಂದು ಅಸಾಯಕ ಬಡ ಭೀಕ್ಷುಕನ ಹುಣ್ಣನ್ನು ನೆಕ್ಕುತ್ತಿದ್ದವು. ಲಾಜರನು ಹಸಿವೆಯಿಂದ ಬಳಲುವುದನ್ನು ಕಂಡು ಯಾರು ಸಹಾಯಮಾಡಲಿಲ್ಲ.
8


ಒಂದು ದಿನ ಬೆಳಿಗ್ಗೆ ಲಾಜರನು ನಿದ್ದೆಯಿಂದ ಏಳಲೆ ಇಲ್ಲ. ಹಸಿವೆಯಿಂದ. ಸ್ನೇಹಿತರಿಲ್ಲದಂತಹ ಜೀವಿತವನ್ನು ತ್ಯಜಿಸಿದ್ದನು. ಅಂದರೆ ಲಾಜರನು ಸತ್ತಿದ್ದನು.
9


ಲಾಜರನು ಸತ್ತ ಕ್ಷಣದಿಂದ ಆನಂದದ ಸಮಯ ಆತನಿಗೆ ಪ್ರಾರಂಬವಾಯಿತು. ಲಾಜರನು ಸತ್ತನಂತರ ಆತನನ್ನು ದೇವದೂತರು ಹೋತ್ತುಕೊಂಡು ಅಬ್ರಹಾಮನ ಬಳಿಗೆ ಕರೆದುಕೊಂಡು ಹೊದರೆಂದು ಯೇಸು ಹೇಳಿದನು. ಲಾಜರನು ದೇವರಿಂದ ಸಂತೈಸಲ್ಪಟ್ಟನು.
10


ಅದೇ ರೀತಿ ಐಶ್ವರ್ಯವಂತನು ಸಹ ಸತ್ತನು, ತನ್ನ ಎಲ್ಲಾ ಐಶ್ವರ್ಯವು ಅವನ ಜೀವನವನ್ನು ರಕ್ಷಿಸಲಾಗಲಿಲ್ಲ. ಸಾವು ಬಂದಾಗ ಅದನ್ನು ತಡೆಯಲು ಯಾರಿಂದಲು ಸಾದ್ಯವಿಲ್ಲ.
11


ಐಶ್ವರ್ಯವಂತನ ಶವ ಸಂಸ್ಕಾರವಾಯಿತು, ಬಹುಶ: ಬಹಳ ಜನ ಆತನ ಅಂತ್ಯಸಂಸ್ಕಾರದಲ್ಲಿ ಪಾಲ್ಗೊಂಡು ಆತನು ಒಳ್ಳೆಯವನು. ತುಂಬಾ ಬುದ್ದಿವಂತ ಮತ್ತು ಯಶಸ್ಸನ್ನು ಕಂಡಂತಹ ವ್ಯಕ್ತಿಯಿಂದು ಹೂಗಲಿರಬಹುದು. ಆದರೆ ಇಂತಹ ಹೊಗಳಿರಬಹುದು. ಆದರೆ ಇಂತಹ ಹೊಗಳಿಕೆಗಳು ಆತನಿಗೆ ಯಾವುದೆ ಸಹಾಯಮಾಡಲಿಲ್ಲ ಏಕೆಂದರೆ ಆತನು ನರಕದಲ್ಲಿದ್ದನು.
12


ನರಕದಲ್ಲಿ ಐಶ್ವರ್ಯವಂತನು 'ತಂದೆಯೆ, ಅಬ್ರಹಾಮನೆ, ಲಾಜರನನ್ನು ಕಳುಹಿಸು ಅವನು ತನ್ನ ತುದಿಬೆರಳನ್ನು ನೀರಿನಲ್ಲಿ ಅದ್ದಿ ನನ್ನ ನಲಿಗೆಯನ್ನು ತಣ್ಣಗೆ ಮಾಡಲಿ, ಈ ಉರಿಯಲ್ಲಿ ಸಂಕಟಪಡುತ್ತೆನೆ' ಎಂದು ಕೂಗಿ ಹೇಳಿದನು.
13


"ನೀನು ಅಶಿಸಿದ ಸುಖವನ್ನು ನಿನ್ನ ಜೀವನದಲ್ಲಿ ಹೊಂದಿದಿ ಆದರೆ ಲಾಜರನಿಗೆ ಏನು ಇರಲಿಲ್ಲ" ಎಂದು ಅಬ್ರಹಾಮನು ಆತನನ್ನು ನೆನಪಿಸಿದನು. ಈಗಲಾದರು ಲಾಜರನಿಗೆ ಸಮಧಾನ, ನೀನಗೆ ಸಂಕಟವಿದೆ. ನಮ್ಮ ಮಧ್ಯದಲ್ಲಿರಿವ ಡೊಂಗರವನ್ನು ನಾವಾಗಲಿ ನೀನಾಗಲಿ ದಾಟಿ ಹೂಗಲಾಗದು.
14













ಐಶ್ವರ್ಯವಂತನು, ಬಡವನು

ದೇವರ ವಾಕ್ಯವಾದ ಬೈಬಲ್‌ನಿಂದ ಆರಿಸಿದ ಕಥೆ

ಸಿಕ್ಕುವ ಭಾಗ

**ಲೂಕ 16**

**"ನಿನ್ನ ವಾಕ್ಯವಿವರಣೆಯಿಂದ ಜ್ಞಾನೋದಯವಾಗುವದು."**
**ಕೀರ್ತನೆ 119:130**

ನಾವು ಕೆಟ್ಟದಾದ ಕಾರ್ಯಗಳನ್ನು ಮಾಡಿದ್ದೇವೆಂದು ದೇವರು ತಿಳಿದಿರುವನು. ಈ ಕೆಟ್ಟ ಕಾರ್ಯಗಳನ್ನು ಆತನು ಪಾಪವೆಂದು ಕರೆಯುತ್ತಾನೆ. ಪಾಪದ ಶಿಕ್ಷೆಯು ಮರಣವಾಗಿದೆ.

ದೇವರು ನಮ್ಮನ್ನು ತುಂಬಾ ಪ್ರೀತಿಸುವದರಿಂದ ತನ್ನ ಮಗನಾದ ಯೇಸುಕ್ರಿಸ್ತನನ್ನು ಈ ಲೋಕಕ್ಕೆ ಕಳುಹಿಸಿ ನಮ್ಮ ಪಾಪದ ಆ ಶಿಕ್ಷೆಯನ್ನು ಆತನು ತನ್ನ ಮೇಲೆ ಹೊತ್ತು ಕೊಂಡು ಶಿಲುಬೆಯ ಮೇಲೆ ಪ್ರಾಣಕೊಡುವಂತೆ ಮಾಡಿದನು. ಆತನು ಸತ್ತವರೊಳಗಿಂದ ಎದ್ದು ಪರಲೋಕಕ್ಕೆ ಏರಿಹೋಗಿದ್ದಾನೆ. ಯೇಸುಕ್ರಿಸ್ತನ ಮೂಲಕ ದೇವರು ನಮ್ಮ ಪಾಪಗಳನ್ನು ಕ್ಷಮಿಸುತ್ತಾನೆ.

ನೀನು ನಿನ್ನ ಪಾಪಗಳಿಂದ ದೇವರ ಕಡೆಗೆ ತಿರುಗುವದಾದರೆ ಆತನಿಗೆ ಹೀಗೆ ಹೇಳು; ಪ್ರೀತಿಯುಳ್ಳ ದೇವರೇ, ಯೇಸುಕ್ರಿಸ್ತನು ನನ್ನ ಪಾಪಕ್ಕಾಗಿ ಸತ್ತು, ತಿರುಗಿ ಎದ್ದು ಬಂದು ಜೀವಿಸುತ್ತಿದ್ದಾನೆ ಎಂದು ನಂಬುತ್ತೇನೆ. ನೀನು ನನ್ನ ಹೃದಯದೊಳಗೆ ಬಂದು ನನ್ನ ಪಾಪಗಳನ್ನು ಕ್ಷಮಿಸು. ಈ ಮೂಲಕ ನಾನು ಹೊಸ ಜೀವಿತವನ್ನು ಪಡೆದುಕೊಂಡು ನಿನ್ನೊಂದಿಗೆ ಸದಾ ಜೀವಿಸುವೆನು. ನಿನ್ನ ಮಗನಾಗಿ ನಿನಗಾಗಿ ಜೀವಿಸಲು ನನಗೆ ಸಹಾಯ ಮಾಡು. ಆಮೆನ್. ಯೋಹಾನ 3:16

ನೀನು ಪ್ರತಿ ದಿನವೂ ಬೈಬಲ್ ಓದು ಮತ್ತು ಪ್ರಾರ್ಥನೆಯಲ್ಲಿ ದೇವರೊಂದಿಗೆ ಮಾತಾಡು.